# ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸೇಡಂ.

ಸಿ.ಸಿ. ನಂಃ 164/2015 ಸಿಡಬ್ಲೂ : 11 ಪಿಡಬ್ಲೂಃ 8

ಪ್ರಮಾಣವಚನ ಬೋಧಿಸಲಾಯಿತು ದಿಃ13-03-2026

ಹೆಸರು : ಬಾಪುಗೌಡ

ತಂದೆ ಹೆಸರು : ಸಿದ್ದನಗೌಡ ಪಾಟೀಲ್

ವಯಸ್ಸು : 41 ವರ್ಷ

ಉದ್ಯೋಗ : ಪಿ ಐ ಲೋಕಾಯುಕ್ತ ಆದೇಶದಲ್ಲಿರುವವರು

ವಾಸಸ್ಥಳ : ಬೀದರ್

**: ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ :**

ನಾನು 01-10-2014 ರಿಂದ 08-06-2016 ವರೆಗೂ ಸೇಡಂ ಪಿ ಎಸ್ ನಲ್ಲಿ ಪಿ ಎಸ್ ಐ ಎಂದು ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ01-10-2014 ರಂದು ಚಾ ಸಾ 10 ರವರಿಂದ ಸದರಿ ಪ್ರಕರಣದ ಕಡತವನ್ನು ಪಡೆದುಕೊಂಡು, ದಿ.16-11-2014 ಸರ್ವೆ ನಂ. 643 ನೇದ್ದಕ್ಕೆ ಸಂಬಂಧಿಸಿದ ಪಹಣಿ ಪತ್ರಿಕೆಯನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಸಾಕ್ಷಿಯು ಸದರಿ ಪಹಳಿ ಪತ್ರಿಕೆಯನ್ನು ಈಗ ನೋಡಿ ಗುರುತಿಸಿದ್ದು ಅದನ್ನು ನಿ ಪಿ 6 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿ ಪಿ 6(ಎ) ಎಂದು ಗುರುತಿಸಲಾಯಿತು. ಆರೋಪಿತ ವಿರುದ್ದ ಆರೋಪಿ ಸಾಬೀತು ಆಗಿರುವುದರಿಂದ ಅದೇ ದಿನ ಮಾನ್ಯ ನ್ಯಾಯಾಲಯಕ್ಕೆ ಅಂತಿಮ ವರದಿಯನ್ನು ಸಲ್ಲಿಸಿರುತ್ತೇನೆ.

**ಪಾಟೀಸವಾಲುಃ** ಆರೋಪಿ ಪರ ಶ್ರಿ ಬಿ ಟಿ ವಕೀಲರಿಂದ:

ದಿಃ01-10-2014 ರಂದು ಚಾ ಸಾ 10 ರವರಿಂದ ಸದರಿ ಪ್ರಕರಣದ ಕಡತವನ್ನು ಪಡೆದುಕೊಂಡು, ದಿ.16-11-2014 ಸರ್ವೆ ನಂ. 643 ನೇದ್ದಕ್ಕೆ ಸಂಬಂಧಿಸಿದ ಪಹಣಿ ಪತ್ರಿಕೆಯನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ.

ಮರುವಿಚಾರಣೆಃ ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ. ಇದೆ.**

**ಪ್ರ. ದ. ನ್ಯಾ. ದಂ. ಸೇಡಂ.**